ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಮಂಗಳವಾರ ೨೨ನೇ ಮಾರ್ಚ್ ೧೯೮೩/ಚೈತ್ರ ೧, ೧೯೦೫.

ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ ಸದನವು ಬೆಳಿಗ್ಗೆ ೧೧–೦೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀ ವೀರಣ್ಣ) ಅಧ್ಯಕ್ಷ ಪೀಠವನ್ನಲಂಕರಿಸಿದರು.

ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು

ಭದ್ರಾ ಜಲಾಶಯ ಯೋಜನೆಯ ಕೆಳಗಡೆ ಅಪ್ಪರ್ ಆನವೇರಿ ಕಾಲುವೆಯನ್ನು ತೆಗೆಯುವುದು.

೯೧. ಶ್ರೀ ಡಿ. ಜಿ. ಬಸವನಗೌಡ (ಹೊನ್ನಾಳಿ).— ಮಾನ್ಯ ಲೋಕೋಪಯೋಗಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

(ಅ) ಭದ್ರಾ ಜಲಾಶಯದ ಕೆಳಗಡೆ ಅಪ್ಪರ್ ಆನವೇರಿ ಕಾಲುವೆಯನ್ನು ತೆಗೆಯಲು ಈ ಹಿಂದೆ ಅಂದಾಜು ತಯಾರಾಗಿದ್ದು, ಇದುವರೆವಿಗೂ ಕಾರ್ಯ ಪ್ರಾರಂಭ ಮಾಡದಿರಲು ಕಾರಣವೇನು ?

(ಆ) ಮುಂದೆ ಸದರಿ ಕಾರ್ಯವನ್ನು ಕೈಗೊಳ್ಳಲಾಗುವುದೇ ?

ಶ್ರೀ ಎಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು)—

(ಅ) ಯೋಜನೆ ಕಾರ್ಯ ಸಾಧ್ಯವಲ್ಲವಾದುದರಿಂದ, ಪ್ರಾರಂಭಿಸಿಲ್ಲ.

(ಆ) ವೇಲೆ ನೀಡಿದ ಉತ್ತರದಿಂದ, ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಡಿ. ಜಿ. ಬಸವನಗೌಡ.—ಭದ್ರಾ ಯೋಜನೆ ತಯಾರಾದಾಗ ಆನವೇರಿ ಕೆನಾಲ್ ಸೇರಿಸಿ ಕೊಂಡು ಅಂದಾಜು ಮಾಡಲಾಗಿತ್ತು. ಅಪ್ಪರ್ ಆನವೇರಿ ಕೆನಾಲ್ ಡಿಸ್ಟ್ರಿಬ್ಯೂಟರಿ ಕೆನಾಲ್ ತೆಗೆದರೆ ೫೦ ಸಾವಿರ ಎಕರೆ ನೀರಾವರಿಯಾಗುತ್ತದೆ ಎಂಬ ಅಂದಾಜು ಇದೆ. ಇದನ್ನು ಮಾಡುವುದಕ್ಕೆ ಸರ್ಕಾರಕ್ಕೆ ಸಾಧ್ಯವಿಲ್ಲವೇ ?

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರ ಪ್ರಶ್ನೆಗೆ ಅಲ್ಲಿ ೫೦ ಸಾವಿರ ಎಕರೆ ನೀರಾವರಿಯಾಗುವುದಿಲ್ಲ. ಅಪ್ಪರ್ ಆನವೇರಿ ಡಿಸ್ಟ್ರಿಬ್ಯೂಟರಿ ಕೆನಾಲ್‌ನ್ನು ಈಗ ಇರತಕ್ಕಂಥ ೭೬ನೇ ಕಿಲೋ ಮೀಟರ್‌ನ ಟನಲ್‌ನ ಪಕ್ಕದಲ್ಲಿ ನೀರನ್ನು ಬಿಟ್ಟು ಅಪ್ಪರ್ ಆನವೇರಿ ಚಾನಲ್ ಮಾಡಬೇಕೆಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ. ಇದರಲ್ಲಿ ೭೬ನೇ ಕಿಲೋಮೀಟರ್‌ನಲ್ಲಿರತಕ್ಕಂತಹ ಚಾನಲ್‌ನ ಪೂರ್ಣ ಕೆಪಾಸಿಟಿ ೨೫೦೦ ಕ್ಯೂಸೆಕ್ಸ್ ನೀರು ಹರಿಯುವುದಕ್ಕೆ ಸಾಧ್ಯ. ಆದರೆ ಈಗ ಅಷ್ಟೂ ಪೂರ್ಣವಾಗಿ ಹರಿಯುತ್ತಿದೆ. ಮಾನ್ಯ ಸದಸ್ಯರು ಹೇಳಿದ ರೀತಿಯಲ್ಲಿ ಮಾಡಬೇಕಾದರೆ, ಇನ್ನೂ ೨೦ ಸಾವಿರ ಎಕರೆಗೆ ನೀರನ್ನು ಒದಗಿಸಬೇಕಾದರೆ. ಈಗ ಇರತಕ್ಕಂತಹ ಚಾನಲ್‌ನ್ನು ರೀ ಮಾಡಲ್ ಮಾಡಬೇಕಾಗುತ್ತದೆ. ಇದಕ್ಕೆ ಸುಮಾರು ೧೦ ಕೋಟಿ ರೂಪಾಯಿಗಳಷ್ಟು ಖರ್ಚಾಗುತ್ತದೆ. ೨ನೆಯದಾಗಿ ಅಪ್ಪರ್ ಆನವೇರಿ ಡಿಸ್ಟ್ರಿಬ್ಯೂಟರಿ ಚಾನಲ್‌ನ್ನು ಮಾಡಬೇಕಾದರೆ ಮತ್ತೆ ೧೦–೧೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. ಹೀಗೆ ಒಟ್ಟು ಸುಮಾರು ೨೨ ಕೋಟಿ ರೂಪಾಯಿ ಗಳನ್ನು ಖರ್ಚು ಮಾಡುವುದಕ್ಕೆ ಪ್ರಯತ್ನ ಮಾಡಿದರೆ ನೀರಾವರಿಯಾಗತಕ್ಕಂತಹದ್ದು ೨೨ ಸಾವಿರ ಎಕರೆ.

ಇದು ಅಷ್ಟೊಂದು ಲಾಭದಾಯಕವಾದ ಯೋಜನೆಯಲ್ಲವೆಂಬುದು ತಜ್ಞರ ಅಭಿಪ್ರಾಯ. ಆದರೆ ಇದರ ಬಗ್ಗೆ ಪೂರ್ಣವಾಗಿ ತನಿಖೆ ಮಾಡಿಲ್ಲ, ಇದಕ್ಕಾಗಿ ಅಂದಾಜು ವೆಚ್ಚವನ್ನು ತಯಾರು ಮಾಡಿಲ್ಲ. ಬರೀ ಲೈಸಿಗ್ ಎಸ್ಟಿಮೇಟ್ ಮಾತ್ರ ಮಾಡಿದ್ದಾರೆ. ಆಪ್ಟರ್ ಛದ್ರಾ ಕೂಡ ಪರಿಶೀಲನೆಯಲ್ಲಿರುವುದರಿಂದ ತಾವು ಹೇಳಿರತಕ್ಕಂತಹ ಸಲಹೆಯ ಬಗ್ಗೆಯೂ ಪರಿಶೀಲನೆ ಮಾಡುತ್ತೇನೆ.

ಹೊಸದುರ್ಗ ತಾಲ್ಲೂಕಿನಲ್ಲಿ ವಿಪರೀತ ಮಳೆಬಿದ್ದ ಪರಿಣಾಮವಾಗಿ ಏಕಕಾಲದಲ್ಲಿ 3-4 ಕೆರೆಗಳು ಒಡೆದು ಹೋಗಿರುವ ವಿಚಾರ.

೯೨. ಶ್ರೀ ಜಿ. ಬಸಪ್ಪ (ಹೊಸದುರ್ಗ).—ಮಾನ್ಯ ಸಣ್ಣ ನೀರಾವರಿ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಹೊಸದುರ್ಗ ತಾಲ್ಲೂಕಿನಲ್ಲಿ ವಿಪರೀತ ಮಳೆ ಬಿದ್ದ ಪರಿಣಾಮವಾಗಿ ಏಕಕಾಲದಲ್ಲಿ ೩-೪ ಕೆರೆಗಳು ಒಡೆದು ಹೋಗಿದ್ದುದು ನಿಜವೆ ?

(ಆ) ಹಾಗಿದ್ದಲ್ಲಿ ಕೆರೆ ಹಿಂದಲ ಜಮೀನುಗಳು ಕೊಚ್ಚಿಹೋಗಿ ನಷ್ಟವಾಗಿರುವ ವಿಷಯ ನಿಜವೆ ?

(ಇ) ಆ ರೀತಿ ನಷ್ಟ ಅನುಭವಿಸಿದ ಜನಗಳಿಗೆ ಪರಿಹಾರ ಕೊಡಲಾಗಿದೆಯೆ ?

(ಈ) ಇನ್ನೂ ಪರಿಹಾರ ಧನ ಪಡೆಯದಿರುವ ಜನಗಳ ಸಂಖ್ಯೆ ಎಷ್ಟು ?

ಶ್ರೀ ಆರ್. ಎನ್. ಲಕ್ಷ್ಮೀಪತಿ (ಸಣ್ಣ ನೀರಾವರಿ ಖಾತೆಯ ರಾಜ್ಯ ಸಚಿವರು).—

(ಅ) ನಿಜವಲ್ಲ.

(ಆ) ಮೇಲಿನ ಉತ್ತರದಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಇ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

(ಈ) ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಘಟಪ್ರಭಾ ಎಡದಂಡೆ ನಾಲೆಯ ಕೆಳಗಡೆ ಮುಧೋಳ್ ತಾಲ್ಲೂಕಿನಲ್ಲಿ ಬರುವ ಜಮೀನುಗಳಿಂದ (ಘೋಷಿತ ಕ್ಷೇತ್ರ) ನೀರಿನ ಕರ ವಸೂಲಾತಿ.

೯೩. ಶ್ರೀ ಅಶೋಕ್ ಕೆ. ಕಟ್ಟೀಮನಿ (ಮುಧೋಳ್).—ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

(ಅ) ಬಿಜಾಪುರ ಜಿಲ್ಲೆ ಮುಧೋಳ ತಾಲ್ಲೂಕಿನಲ್ಲಿ ಘಟಪ್ರಭಾ ಎಡದಂಡೆ ನಾಲೆಯ ಕೆಳಗೆ ಬರುವ ಘೋಷಿತ ಕ್ಷೇತ್ರಕ್ಕೆ ಸೇರಿದ ಜಮೀನುಗಳಿಂದ, ಅನೇಕ ವರ್ಷಗಳಿಂದ ನೀರನ್ನು ಕೊಡದೆಯೇ, ನೀರಿನ ಕರ ವಸೂಲು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

(ಆ) ಜಮೀನುಗಳಿಗೆ ನೀರನ್ನು ಕೊಡದೆಯೇ ಅನೇಕ ವರ್ಷಗಳಿಂದ ವಸೂಲು ಮಾಡಿರುವ ಹಣವನ್ನು ವಾಪಸ್ ಮಾಡಲು ಮತ್ತು ಅಂತಹ ನೀರಿನ ಕರ ವಸೂಲಿಯನ್ನು ನಿಲ್ಲಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಪೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು). —

(ಅ) ಇಲ್ಲ.

(ಆ) ಪ್ರಶ್ನೆ ಉದ್ಭವಿಸುವುದಿಲ್ಲ.

ಮಾನ್ಯ ಸದಸ್ಯರು ಹಾಜರಿರಲಿಲ್ಲ.